**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.28/2013**

| | | |
|---|---|---|
| ಸಾಕ್ಷಿದಾರರ ಹೆಸರು | : ಸೋಹನ್ ಲಾಲ್ | ಪ್ರಾಸಾ-11 |
| ತಂದೆಯ ಹೆಸರು | : ಶೇಶಮಹಾಲ್ ಜಿ | ಚಾಸಾ-10 |
| ವಯಸ್ಸು | : 51 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗಿರವಿ ಅಂಗಡಿ | ದಿನಾಂಕಃ 07.03.2026. |
| ವಾಸಸ್ಥಳ | : ಮೈಸೂರು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಚಾಸಾ-9 ಮತ್ತು 11 ರವರ ಪರಿಚಯ ನನಗಿದೆ.

ಸಾಕ್ಷಿಯು ದಿ.06.12.2011 ರಂದು ಬರವಣಿಗೆ ಮಾಡಿದ ಮಹಜರ್ ನ್ನು ಮತ್ತು ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರಿ ದೃಢೀಕೃತ ಮಹಜರ್ ನ್ನು ನಿಪಿ-25 ಎಂದು ಗುರುತಿಸಲಾಯಿತು. ಸದರಿ ದಾಖಾತಿಯು ದೃಢೀಕೃತ ಪ್ರತಿಯಾದ ಕಾರಣ ಸಾಕ್ಷಿಯು ಸಹಿಯನ್ನು ಗುರುತಿಸಲಾಗಿರುವುದಿಲ್ಲ.

ನಿಪಿ-25 ಕ್ಕೆ ನಾನು ದಿ.06.12.2011 ರಂದು ಶಿವರಾಮ್ ಪೇಟೆ, ಮಹಾವೀರ್ ಜ್ಯುವೆಲ್ಲರ್ ನಲ್ಲಿ ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ಆರೋಪಿತರುಗಳು ಕಳ್ಳತನ ಮಾಡಿದ ಚಿನ್ನದ ಆಭರಣಗಳನ್ನು ಚಾಸಾ-9 ರವರ ಅಂಗಡಿಯಲ್ಲಿ ಅಡವಿಟ್ಟಿರುವುದಾಗಿ ತಿಳಿಸಿದ ಕಾರಣ ಪೋಲಿಸರು ಆ ದಿನ ಸದರಿ ಆಭರಣಗಳನ್ನು ತಮ್ಮ ವಶಕ್ಕೆ ಪಡೆದುಕೊಳ್ಳಲು ಬಂದ ಸಮಯದಲ್ಲಿ ನಾನು ನಿಪಿ-25 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಆಭರಣವನ್ನು ಪೋಲಿಸರು ಚಿನ್ನದ ಗಟ್ಟಿಯ ರೂಪದಲ್ಲಿ 70 ಗ್ರಾಂ ನಂ ಚಿನ್ನದ ಗಟ್ಟಿಯನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಆಗ ಸಮಯ ಮ.3.00 ರಿಂದ 4.00 ಗಂಟೆಯಾಗಿರಬಹುದು. ಸದರಿ ಸಮಯದಲ್ಲಿ ಪೋಲಿಸರು ಚಿನ್ನದ ಗಟ್ಟಿಯನ್ನು ವಶಕ್ಕೆ ಪಡೆದುಕೊಂಡು, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನಾನು ಮೈಸೂರು ರಸ್ತೆಯಲ್ಲಿ ನಾಕೋಡ ಪಾನ್ ಬ್ರೋಕರ್ಸ್ ಅಂಗಡಿಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸಮಯದಲ್ಲಿ ನಾನು, ಚಾಸಾ-9 ಮತ್ತು 11 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಸಮಯದಲ್ಲಿ ನಮ್ಮ ಸಮಕ್ಷಮ ಸುಮಾರು 75 ಗ್ರಾಂ ನ ಚಿನ್ನದ ಗಟ್ಟಿಯನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಚಿನ್ನದ ಗಟ್ಟಿಯು 3 ಇಂಚು ಉದ್ದ

ಮತ್ತು ಮುಕ್ಕಾಲು ಇಂಚು ಅಗಲ ಇತ್ತು ಎಂದರೆ ಸರಿ. ಅದರ ಮೇಲೆ VBR747 ಎಂದು ಮುದ್ರಿಸಲಾಗಿತ್ತು ಎಂದರೆ ಸರಿ. ಸದರಿ ಒಡವೆಗಳನ್ನು 1 ನೇ ಆರೋಪಿ ಹಾಜರುಪಡಿಸಿದ್ದರು ಎಂದರೆ ಸರಿ.

**<u>ಆರೋಪಿಯು ತಲೆ ಮರೆಸಿಕೊಂಡ ಕಾರಣ ಪಾಟೀ ಸವಾಲುಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.